ಒಳಚರಂಡಿ ಕಾಮಗಾರಿ

24(147); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರ)

ಅ) ಹಿರೇಕೆರೂರು ನಗರದ ಒಳಚರಂಡಿ ಕಾಮಗಾರಿ ಯೋಜನೆಯು ಸರ್ಕಾರದ ಮುಂದಿದೆಯೇ;

ಆ) ಯಾವಾಗ ಕಾಮಗಾರಿ ಪ್ರಾರಂಭಿಸಲಾಗುವುದು?

ಶ್ರೀ ವಿನಯಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು)

ಅ) ಹಿರೇಕೆರೂರು ನಗರದ ಒಳಚರಂಡಿ ಯೋಜನೆಗೆ ಸರ್ಕಾರದ ಆದೇಶ ಸಂ. ನಅಇ/06/ಯುಡಿಎಸ್/2011, ಬೆಂಗಳೂರು, ದಿನಾಂಕ: 17–11–2011ರಲ್ಲಿ ₹ 827.13 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಆ) ಗ್ರಾಮಸಾರ ಶುದ್ದೀಕರಣ ಘಟಕ ನಿರ್ಮಾಣಕ್ಕೆ ಸ್ಥಳೀಯ ಸಂಸ್ಥೆ ನೀಡಿರುವ ಭೂಮಿಯ ತಕರಾರು ಜೆ.ಎಂ.ಎಫ್.ಸಿ. ನ್ಯಾಯಾಲಯದಿಂದ ದಿನಾಂಕ: 12–07–2013ರಲ್ಲಿ ತೀರ್ಮಾನವಾಗಿರುತ್ತದೆ. ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡಲು ಕ್ರಮ ಕೈಗೊಂಡು ಶೀಘ್ರವಾಗಿ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಗುವುದು. ಸದರಿ ಕಾಮಗಾರಿಯನ್ನು 2 ವರ್ಷಗಳಲ್ಲಿ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಕಾಗವಾಡ–ಕಲಾದಗಿ ರಾಜ್ಯ ಹೆದ್ದಾರಿ 53ರ 15.1ರ ಸೇತುವೆ ನಿರ್ಮಾಣ

25(122); ಶ್ರೀ ಭರಮಗೌಡ (ರಾಜು) ಹಾಲಗೌಡ ಕಾಗೆ (ಕಾಗವಾಡ)

ಅ) ಕಾಗವಾಡ–ಕಲಾದಗಿ ರಾಜ್ಯ ಹೆದ್ದಾರಿ–53 ರ ಕಿ.ಮೀ. 15.1 ರಲ್ಲಿ (ಉಗಾರಖುರ್ದ) ನದಿಯು ಹರಿಯುತ್ತಿದ್ದು, ಮಳೆಗಾಲದಲ್ಲಿ ಸಂಪೂರ್ಣವಾಗಿ ರಸ್ತೆ ಮುಳುಗಡೆಯಾಗಿ ಸಂಚಾರ ಸ್ಥಗಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸೇತುವೆ ನಿರ್ಮಾಣ ಕಾಮಗಾರಿಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಸೇತುವೆ ನಿರ್ಮಾಣ ಮಾಡುವ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು (ವಿವರ ನೀಡುವುದು)?

ಡಾ: ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ಹೌದು.

ಆ) ಕಾಗವಾಡ ಕಲಾದಗಿ ರಾಜ್ಯ ಹೆದ್ದಾರಿ–53 ರ ಕಿ.ಮೀ. 15.40ರಲ್ಲಿ (ಉಗಾರ ಖುರ್ದ) ಸೇತುವೆ ಪುನರ್ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತವು ₹ 200.00 ಲಕ್ಷಗಳಾಗಬಹುದೆಂದು ಅಂದಾಜಿಸಲಾಗಿದೆ. ಸದರಿ ಕಾಮಗಾರಿಯನ್ನು ಅನುದಾನದ ಲಭ್ಯತೆಯ ಅನುಸಾರ ಕೈಗೆತ್ತಿಕೊಳ್ಳಲಾಗುವುದು.

ಕುಡುಚಿ ಸೇತುವೆ ನಿರ್ಮಾಣ

26(123); ಶ್ರೀ ಭರಮಗೌಡ (ರಾಜು) ಹಾಲಗೌಡ ಕಾಗೆ (ಕಾಗವಾಡ)

ಅ) ಕಾಗವಾಡ–ಕಲಾದಗಿ ರಾಜ್ಯ ಹೆದ್ದಾರಿ–53 ರ ಕಿ.ಮೀ. 22.1 ರಲ್ಲಿ ಕುಡಚಿ ಸೇತುವೆ ಇದ್ದು, ಈ ಸೇತುವೆಯು ಸಣ್ಣ ಪ್ರಮಾಣದಲ್ಲಿ ಮಳೆ ಬಂದರೂ ಸಹ ಸಂಪೂರ್ಣವಾಗಿ ಮುಳುಗಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸೇತುವೆ ಮನರ್ ನಿರ್ಮಾಣದ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ?

ಡಾ: ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ಬಂದಿದೆ.